ಶ್ರೀ ಹೆಚ್.ಡಿ. ದೇವೇಗೌಡ.—ಈ ರೀತಿ ಏತಕ್ಕೆ ಮಾಡಿದ್ದಾರೋ ನನಗೆ ಗೊತ್ತಿಲ್ಲ. ೧೯೮೧-೮೨ನೇ ಸಾಲಿನಲ್ಲಿ ಈ ಕೆಲಸವನ್ನು ಲೆಟ್ ಔಟ್ ಮಾಡಿದ್ದಾರೆ. ೧೦ ಲಕ್ಷ ರೂಪಾಯಿಯ ಸಣ್ಣ ಕೆಲಸ ಇದು. ಇದಕ್ಕೆ ನಾಲ್ಕು ವರ್ಷ ಬೇಕಾಗಿಲ್ಲ. ಆದರೂ ಅವರು ನಿಗದಿ ಮಾಡಿದ್ದಾರೆ. ೨೮-೨-೮೫ ರಲ್ಲಿ ಈ ಕೆಲಸ ಮುಗಿಸಬೇಕು. ತಿಂಗಳ ಪ್ರೋಗ್ರೆಸ್ ಸರಿಯಾಗಿ ಮಾಡದಿದ್ದರೆ ಕಂಟ್ರಾಕ್ಟರ್ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಒಂದು ವೇಳೆ ಕಂಟ್ರಾಕ್ಟರ್ ಮಾಡದಿದ್ದರೆ ಇಲಾಖೆಯಿಂದಲಾದರೂ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಪ್ರಶ್ನೆ ನಂ ೮೨(೫೦)ಕ್ಕೆ ವಿವರವನ್ನು ಸಂಗ್ರಹ ಮಾಡಲು ನನಗೆ ಸ್ವಲ್ಪ ಸಮಯ ಬೇಕಾಗಿದೆ.

ಅಧ್ಯಕ್ಷರು.—ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

ಮಂಡ್ಯ ವಲಯದಲ್ಲಿ ಸೇರಿರುವ ಚನ್ನಪಟ್ಟಣ ಹಾಗೂ ಸಾತನೂರಿನ ಅರಣ್ಯ ಪ್ರದೇಶಗಳು

೮೩ (೧೩೦) ಶ್ರೀ ಕೆ. ಜಿ. ಶ್ರೀನಿವಾಸಮೂರ್ತಿ (ಸಾತನೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ಮತ್ತು ಸಾತನೂರು ವಿಧಾನ ಸಭಾ ಕ್ಷೇತ್ರದ ಅರಣ್ಯಗಳು ಮಂಡ್ಯ ವಲಯಕ್ಕೆ ಸೇರಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಈ ರೀತಿ ದೂರದ ಮಂಡ್ಯ ವಲಯಕ್ಕೆ ಸೇರಿಸುವುದರಿಂದ ಅರಣ್ಯ ಅಧಿಕಾರಿಗಳಿಗೆ ಆಡಳಿತ ವ್ಯವಸ್ಥೆಯು ತೊಂದರೆಯಾಗುವುದಿಲ್ಲವೆ ?

ಇ) ಈ ರೀತಿ ತೊಂದರೆಯಾಗಬಾರದೆಂದು ಚನ್ನಪಟ್ಟಣ ಮತ್ತು ಸಾತನೂರು ವಿಧಾನಸಭಾ ಸದಸ್ಯರು ಮಂಡ್ಯ ವಲಯದಿಂದ ಬೆಂಗಳೂರು ಅರಣ್ಯ ವಲಯಕ್ಕೆ ಸೇರಿಸುವಂತೆ ಮನವಿ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ ಚನ್ನಪಟ್ಟಣ ಮತ್ತು ಸಾತನೂರು ಅರಣ್ಯ ಇಲಾಖೆಯನ್ನು ಬೆಂಗಳೂರು ವಲಯಕ್ಕೆ ವರ್ಗ ಮಾಡಲು ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಉ) ಸಾತನೂರು ವಿಧಾನಸಭಾ ಕ್ಷೇತ್ರದಲ್ಲಿರುವ ಸೋಲಿಗೇರಿಯನ್ನು ಉತ್ತಮಪಡಿಸಿ ಗಿರಿಧಾಮವನ್ನಾಗಿ ಪರಿವರ್ತಿಸಲು ಸಾಧ್ಯವೇ ?

ಊ) ಸಾತನೂರು ಕ್ಷೇತ್ರದ ಬಸವನಬೆಟ್ಟವನ್ನು ಅಭಯಾರಣ್ಯವನ್ನಾಗಿ ಪರಿವರ್ತಿಸಲು ವನ್ಯ ಪ್ರಾಣಿಗಳನ್ನು ರಕ್ಷಿಸಲು ವಿಶೇಷ ಮಾಡಲಾಗುವುದೆ ?

ಋ) ಹಾಗಿದ್ದಲ್ಲಿ ಎಷ್ಟು ಪರಿವರ್ತನೆ ಮಾಡುವಿರಿ ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಅಂತಹ ಯಾವ ತೊಂದರೆ ಅರಣ್ಯ ಅಧಿಕಾರಿಗಳ ಅನುಭವಕ್ಕೆ ಬಂದಿಲ್ಲ.

ಇ) ಹೌದು.

ಈ) ಚನ್ನಪಟ್ಟಣ ಮತ್ತು ಸಾತನೂರು ವಲಯಗಳನ್ನು ಬೆಂಗಳೂರು ವಿಭಾಗಕ್ಕೆ ವರ್ಗಾಯಿಸಲು ಸೂಕ್ತ ಆದೇಶವನ್ನು ನೀಡಲಾಗುವುದು.

ಉ) ಸಾಧ್ಯವಿದೆ. ಆದರೆ ಈ ಪ್ರದೇಶವನ್ನು ಗಿರಿಧಾಮವನ್ನಾಗಿ ಅಭಿವೃದ್ಧಿಪಡಿಸುವ ಯೋಜನೆ ಸರ್ಕಾರಕ್ಕೆ ಸದ್ಯಕ್ಕೆ ಇಲ್ಲ.

ಊ) ಹೌದು.

ಋ) ಇದು ಸದ್ಯದಲ್ಲಿಯೇ ಘೋಷಿಸಲ್ಪಡುವುದು.

ಶ್ರೀ ಕೆ. ಜಿ. ಶ್ರೀನಿವಾಸಮೂರ್ತಿ.—ಸಾತನೂರು ಮತ್ತು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಅರಣ್ಯಗಳು ಮಂಡ್ಯ ವಲಯಕ್ಕೆ ಸೇರಿರುವುದರಿಂದ ಅಲ್ಲಿ ಆನೆಗಳ ಕಾಟ ತಪ್ಪಿಸುವುದಕ್ಕೆ ಮತ್ತು ಮರಗಳ ಸಾಗಾಣಿಕೆಯನ್ನು ತಪ್ಪಿಸುವುದಕ್ಕೆ ಅಧಿಕಾರಿಗಳು ಮಂಡ್ಯದಿಂದ ಬಂದು ಕ್ರಮ ತೆಗೆದುಕೊಳ್ಳುವುದಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಸಾತನೂರು ಕ್ಷೇತ್ರದಲ್ಲಿ ಸೋಲಿಗೆರಿಯನ್ನು ಉತ್ತಮಪಡಿಸಿ ಗಿರಿಧಾಮವನ್ನಾಗಿ ಪರಿವರ್ತಿಸಲು ಸಾಧ್ಯವೆ ಎಂದು ಕೇಳಿರುವುದಕ್ಕೆ ಆ ಯೋಚನೆ ಸದ್ಯಕ್ಕೆ ಇಲ್ಲ ಎಂದು ಹೇಳಿದ್ದಿರಿ. ಅದನ್ನು ಯಾವಾಗ ಮಾಡುವುದಕ್ಕೆ ಸಾಧ್ಯ ಎಂಬುದನ್ನು ಹೇಳಿ. ಸಾತನೂರು ಕ್ಷೇತ್ರದ ಬಸವನಬೆಟ್ಟವನ್ನು ಅಭಯಾರಣ್ಯವನ್ನಾಗಿ ಪರಿವರ್ತಿಸಿದರೆ ಆನೆಗಳ ಕಾಟ ಕಡಿಮೆಯಾಗುತ್ತದೆ. ಅದ್ದರಿಂದ ಅದನ್ನು ಎಷ್ಟು ದಿವಸಗಳಲ್ಲಿ ಮಾಡುತ್ತೀರಿ ಎಂಬುದನ್ನು ತಿಳಿಸಬೇಕು. ಮತ್ತು ಆ ವಿಷಯದಲ್ಲಿ ಭರವಸೆ ಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎ. ಜೀವಿಜಯ.—ಮೊದಲನೇ ಪ್ರಶ್ನೆ ಈ ವ್ಯಾಪ್ತಿಯಲ್ಲಿ ಬರುವುದಿಲ್ಲ. ಎರಡನೆಯ ಪ್ರಶ್ನೆ ಅವರು ಕೇಳಿದಂತೆ ಚನ್ನಪಟ್ಟಣ ಮತ್ತು ಸಾತನೂರು ವಲಯಗಳನ್ನು ಬೆಂಗಳೂರು ವಿಭಾಗಕ್ಕೆ ಈಗಾಗಲೇ ಸೇರಿಸಲಾಗಿದೆ. ಮೂರನೆಯದಾಗಿ ಬಸವನಬೆಟ್ಟವನ್ನು ಅಭಯಾರಣ್ಯವನ್ನಾಗಿ ಪರಿವರ್ತಿಸಲು ಇನ್ನು ಎರಡು ಮೂರು ತಿಂಗಳೊಳಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇನೆ.

ತುಮಕೂರು ಜಿಲ್ಲೆಯ ತಾಲ್ಲೂಕುಗಳಿಗೆ ನೀರಾವರಿ ಉದ್ದೇಶಗಳಿಗಾಗಿ ಹೇಮಾವತಿ ಅಚ್ಚುಕಟ್ಟಿನಿಂದ ನೀರಿನ ಸೌಲಭ್ಯ

೮೪ (೫೩) ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಹೇಮಾವತಿ ಅಣೆಕಟ್ಟಿನಿಂದ ತುಮಕೂರು ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಿಗೆ ನೀರಾವರಿಗಾಗಿ ನೀರನ್ನು ಒದಗಿಸಲು ಉದ್ದೇಶಿಸಿರುತ್ತದೆ ಹಾಗೂ ಪ್ರತಿ ತಾಲ್ಲೂಕಿನಲ್ಲಿ ಸಾಗುವಳಿಗೆ ಬರುವ ಜಮೀನು ವಿಸ್ತೀರ್ಣವೆಷ್ಟು ?

ಆ) ನವಿಲೆ–ಬಾಗೂರು ಸುರಂಗ ಮಾರ್ಗದ ಕಾಮಗಾರಿ ಕಾರ್ಯಕ್ರಮವಾಗಿ ನಿರೀಕ್ಷಿತ ಪ್ರಮಾಣದಲ್ಲಿ ನಡೆಯುತ್ತಿದೆಯೇ ಮತ್ತು ವಿಳಂಬವಾಗಲು ಕಾರಣಗಳೇನು ?

ಇ) ನವಿಲೆ ಬಾಗೂರು ಸುರಂಗ ಮಾರ್ಗದ ಮುಂದಿನ ಕಿ. ಮೀ. ಡ್ರಾಫ್ಟ್ ಕಟ್ ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆಯೇ ಮತ್ತು ಇದಕ್ಕೆ ಕಾರಣಗಳೇನು ?

ಈ) ನವಿಲೆ ಬಾಗೂರು ಸುರಂಗ ಮಾರ್ಗ ಮುಗಿಯುವುದರೊಳಗೆ ಡ್ರಾಫ್ಟ್ ಮತ್ತು ಕಟ್ ತುಮಕೂರು ಶಾಖೆ ಕಾಲುವೆ ಕಾಮಗಾರಿಗಳು ಮುಗಿದು ನೀರನ್ನು ವ್ಯವಸಾಯಕ್ಕೆ ಒದಗಿಸಲು ಸರ್ಕಾರವು ಕಾರ್ಯ ಕೈಗೊಳ್ಳುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಹೇಮಾವತಿ ಎಡದಂಡೆ ನಾಲೆಯ ಕೆಳಗಡೆ ಉದ್ದೇಶಿಸಿರುವಂತೆ ತುಮಕೂರು ಜಿಲ್ಲೆಯಲ್ಲಿ ತಾಲ್ಲೂಕುವಾರು ನೀರಾವರಿ ಸೌಲಭ್ಯಗೊಳಗಾಗುವ ವಿಸ್ತೀರ್ಣ ಕೆಳಕಂಡಂತೆ ಇದೆ :—

೧.	ತಿಪಟೂರು ತಾಲ್ಲೂಕು...	೧೦,೨೪೩ ಹೆಕ್ಟೇರ್‌ಗಳು.
೨.	ಕುಣಿಗಲ್ಲು ತಾಲ್ಲೂಕು...	೧೯.೦೯೦ ಹೆಕ್ಟೇರ್‌ಗಳು.
೩.	ತುರುವೇಕೆರೆ ತಾಲ್ಲೂಕು...	೪೩,೭೭೨ ಹೆಕ್ಟೇರ್‌ಗಳು.
೪.	ಗುಬ್ಬಿ ತಾಲ್ಲೂಕು...	೪೩.೪೪೯ ಹೆಕ್ಟೇರ್‌ಗಳು.
೫.	ತುಮಕೂರು ತಾಲ್ಲೂಕು...	೧೦,೫೨೨ ಹೆಕ್ಟೇರ್‌ಗಳು.
	ಒಟ್ಟು	೧,೨೭,೦೭೬ ಹೆಕ್ಟೇರ್‌ಗಳು.